10. ಪ್ರಕಟಣೆ.

ಸಭಾಪತಿಯವರಿಂದ ಬಂದ ಸಂದೇಶ ದಂಡ ಪ್ರಕ್ರಿಯಾ ಸಂಹಿತೆ ಕರ್ನಾಟಕ (ತಿದ್ದುಪಡಿ) ವಿಧೇಯಕ 2005.

ಉಪಾಧ್ಯಕ್ಷರು : ಒಂದು ಪ್ರಕಟಣೆ ಇದೆ, ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ, ಕರ್ನಾಟಕ ವಿಧಾನಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ 2005ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ ಕರ್ನಾಟಕ (ತಿದ್ದುಪಡಿ) ವಿಧೇಯಕವನ್ನು ಈ ದಿನ 2ನೇ ಆಗಸ್ಟ್ 2005 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಯಿತೆಂದು ತಿಳಿಸಿರುತ್ತಾರೆ.

11. ಎತ್ತಿಯ ಕಾರ್ಯಕಲಾಪ.

2005-06ನೇಸಾಲಿನ ಪೂರಕ ಅಂದಾಜುಗಳ (ಮೊದಲನೆಯ ಕಂತು) ಮುಂದುವರೆದ ಚರ್ಚೆ.

ಶ್ರೀ ಜಿ ವಿ ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಆಸ್ಪತ್ರೆಗಳಿಗೆ ಔಷಧ ಖರೀದಿಗೆ ಹಣವಿಲ್ಲ ನಾನು ಯಾರ್ಯಾರರು ಎಷ್ಟೆಷ್ಟು ಶೇರ್ ಬಗ್ಗೆ ಮಾತನಾಡುತ್ತಿಲ್ಲ. ಮತ್ತೆ ಫ್ಯಾಕ್ಟರಿಯಲ್ಲಿ ಕಾರ್ಮಿಕರಿಗೆ ಆಕ್ಸಿಡೆಂಟ್ ಡೆತ್ಸ್ ಎಂದು ಇದೆ ಇವತ್ತಿನ ಪರಿಸ್ಥಿತಿಯಲ್ಲಿ ಅದಕ್ಕೆ ಈಗಿರುವ ಪರಿಹಾರ ಧನ ಎನೇನೂ ಸಾಕಾಗುವುದಿಲ್ಲ ಅದನ್ನು ದಯವಿಟ್ಟು ಹೆಚ್ಚು ಮಾಡಬೇಕು. ಲೇಬರ್ ಡಿಪಾರ್ಟ್‌ಮೆಂಟ್‌ನಲ್ಲಿ ಇಂಡಸ್ಟ್ರಿಯಲ್ ಟ್ರೈನಿಂಗ್ (ಐಟಿಐ) ಇನ್‌ಸ್ಟಿಟ್ಯೂಟ್‌ಗಳನ್ನು ಮಾಡಿದ್ದಾರೆ, ಸರ್ಕಾರದ್ದು, ಖಾಸಗಿಯವರು ಇದೆ. ನಿಜವಾಗಿಯೂ ಅದು ಜಾಬ್ ಓರಿಯಂಟೆಡ್‌ಗೆ ಭಾರಿ ಪ್ರಯೋಜನವಾಗುವ ಇನ್‌ಸ್ಟಿಟ್ಯೂಟ್‌ಗಳು. ಆದರೆ ಇವತ್ತು ಏನು ಮಾಡಿದ್ದೀರಿ, ಅದಕ್ಕೆ ಸ್ವಂತ ಬಿಲ್ಡಿಂಗ್ ಇಲ್ಲ, ಸ್ಟಾಫ್ ಸರಿಯಿಲ್ಲ ಸ್ಟಾಫ್ ಸರಿ ಇದ್ದರೆ ಬಿಲ್ಡಿಂಗ್ ಇಲ್ಲ ಇಂತಹ ಸ್ಥಿತಿಗೆ ತಂದಿಟ್ಟಿದ್ದೀರಿ. ಏನೂ ಇನ್‌ಫ್ರಾಸ್ಟ್ರಕ್ಚರ್ಸ್ ಕೊಡದೆ ಐಟಿಐಗಳನ್ನು ನೀವು ಏತಕ್ಕೆ ಪ್ರಾರಂಭ ಮಾಡುತ್ತೀರಿ. ಟೀಚಿಂಗ್, ನಾನ್ ಸ್ಟಾಫ್ ಕೊಡುವುದಿಲ್ಲ ಕಟ್ಟಡಕ್ಕೆ ಹಣ ಕೊಡುವುದಿಲ್ಲ, ಮತ್ತೆ ನೀವು ಏಕೆ ಐಟಿಐಗಳನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿಯನ್ನು ಕೊಡುತ್ತೀರೋ ನನಗೆ ಅರ್ಥವಾಗುತ್ತಿಲ್ಲ? Most impotant –ITI; Job oriented course in education. ಅದೇ ರೀತಿಯಾಗಿ ಇವತ್ತು ನೀವು ಜೆಓಸಿಗಳನ್ನು ತಂದಿದ್ದೀರಿ, ಆ ಜೆಓಸಿ ಪಾಠ ಮಾಡುವ ಮೇಸ್ಟ್ರುಗಳಿಗೆ ವರ್ಷವಾದರೂ ಸಂಬಳ ಕೊಡುವುದಿಲ್ಲ, ಅವರನ್ನು ಮೇಸ್ಟ್ರುಗಳೆಂದು ಟ್ರೀಟ್ ಮಾಡಲು ತಯಾರಿಲ್ಲ, ಅವರ ಅಡ್ರೆಸ್ ಇಲ್ಲ, ಅವರ ಬಗ್ಗೆ ಕಾಳಜಿ ಇಲ್ಲ, ಆ ಜೆಓಸಿ ಕೋರ್ಸ್‌ಗಳನ್ನು ಈಗ ಪ್ರಾರಂಭ ಮಾಡಿಟ್ಟಿದ್ದೀರಿ, ಅದಕ್ಕೆ ಯಾವ ರೀತಿಯಾದ ಒಂದು ಧೋರಣೆ ಇಲ್ಲ, ಅವುಗಳನ್ನು ಮುಚ್ಚುವುದಾದರೆ ಮುಚ್ಚುಬಿಡಿ ಇಲ್ಲವೆಂದರೆ ವ್ಯವಸ್ಥಿತವಾಗಿ ನಡೆಸತಕ್ಕಂತಹ ವ್ಯವಸ್ಥೆಯನ್ನಾದರೂ ಮಾಡಿ. ಜಾಬ್ ಓರಿಯೆಂಟೆಡ್ ಕೋರ್ಸ್‌ಗಳೆಂದು ಮಾಡುವುದು ಐಟಿಐಗಳೆಂದು ಮಾಡುವುದು, ಅದಕ್ಕೆ ಯಾವುದೇ ರೀತಿಯಾದ ಮೂಲಭೂತ ಸೌಕರ್ಯಗಳಿಲ್ಲ; ಅವನ್ನು ನೀವು ಏತಕ್ಕೆ ಮಾಡುವುದಕ್ಕೆ ಹೊರಟ್ಟಿದ್ದೀರಿ? ಮಾನ್ಯ ಸಿದ್ಧರಾಮಯ್ಯನವರಲ್ಲಿ ನಾನು ಒಂದನ್ನು ಕೇಳುತ್ತೇನೆ, ಆ ಐಟಿಐಗಳೇನಿವೆ ಅವಕ್ಕೆ ಕಟ್ಟಡ